doc-419
T-P-2

(1)

R No KKNN 12 ಶ್ರೀ 19 - 12 - 1974

ಸ್ವರ್ಣ ಮಹೋತ್ಸವ ನೆರವೇರಿಸಿದ ಕತ್ರಿಕೆ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily Mysore 4

– For Influential Publicity –

ಸ್ವಾಮಿ: ಆರಮನೆ ಸಿರಸ್ತೇದಾರ್ ಎಂ. ವಿ. ಕುಪ್ಪುರಾವ್ ಸಂಪಾದಕರು: ಧರ್ಮಶ್ರೀ ಚಾರವಾಕ ಎಂ. ಎಸ್. ಕೃಷ್ಣರಾವ್ 3 ಪೈಸೆ

ತಮಿಳುನಾಡಿನಲ್ಲಿ ಅಕ್ಕಿ ಬೆಲೆ ನಿಗದಿ

ಗೌರಿಯ ಮರಣ

ನಾಗರಹೊಳೆ ಪ್ರಾಣಿಧಾಮದಿಂದ ಪ್ರೇಕ್ಷಕರನ್ನು ಎತ್ತಿಕೊಂಡು ಹೋಗುತ್ತಿದ್ದ 48 ವರ್ಷದ ಹೆಣ್ಣಾನೆ ಗೌರಿ ಭಾನುವಾರ ಮೃತಪಟ್ಟಳು

★

ಕಾರ್ಪೊರೇಷನ್ ಚುನಾವಣೆ

ಬೆಂಗಳೂರು ಕಾರ್ಪೊರೇಷನ್ ಚುನಾವಣೆ ಫೆಬ್ರವರಿ ಕಡೆಯ ವಾರ ನಡೆಯುವ ಸಂಭವವಿದೆಯೆಂದು ಗೊತ್ತಾಗಿದೆ ದಾವಣಗೆರೆಯಲ್ಲಿ ನಡೆದ ಪೌರಸಭೆಯ ಅಧ್ಯಕ್ಷರುಗಳ ಸಮ್ಮೇಳನ ಕಾಲದಲ್ಲಿ ಚುನಾವಣೆ ನಡೆಸುವ ವಿಚಾರ ಮೇಯರ್ ಶ್ರೀ ಟಿ ಡಿ. ನಾಗಣ್ಣ ಮತ್ತು ಕಾರ್ಪೊರೇಷನ್ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಲಿಂಗಯ್ಯ ಇವರಲ್ಲಿ ಚರ್ಚೆ ಆಯಿತೆಂದು ವರದಿ ಆಗಿದೆ.

★

ಮೌಲ್ಯ ಇಳಿತಾಯ

ಈ ವರ್ಷ ಜನವರಿ–ಅಕ್ಟೋಬರಿನಲ್ಲಿ ಕೈಗಾರಿಕಾ ಕಾರ್ಮಿಕ ಬಳಕೆದಾರರ ಬೆಲೆ ಸೂಚಿಯಂತೆ ರೂಪಾಯಿ ಬೆಲೆ 27 6 ಪೈಸೆಗೆ ಇಳಿದಿದೆ ಎಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು

1949 ರಲ್ಲಿ ರೂಪಾಯಿ ಮೌಲ್ಯಕ್ಕೆ ಮೂಲ ವರ್ಷವಾಗಿದ್ದು 79 ರಲ್ಲಿ ಅದು 43 4 ಕ್ಕೆ ಇಳಿಯಿತು ಈ ಜನವರಿ ಅಕ್ಟೋಬರ್‌ನಲ್ಲಿ 27 6 ಪೈಸೆಗೆ ಇಳಿಯಿತು.

★

ವಿಶ್ವಬ್ಯಾಂಕಿಗೆ ಸಾಲ

ಜೆಡ್ಡಾದಿಂದ ಬಂದಿರುವ ವಾರ್ತೆಯ ಪ್ರಕಾರ ಸೌದಿ ಅರೇಬಿಯವು ವಿಶ್ವಬ್ಯಾಂಕಿಗೆ ನೂರು ವರ್ಷಗಳಲ್ಲಿ ಸಂತತಿ ಮಾಡುವ 750 ಡಾಲರುಗಳ ಸಾಲ ಕೊಟ್ಟಿದೆ.

ಸಭೆಯಲ್ಲಿ ಗೊಂದಲ

ಉತ್ತರ ಪ್ರದೇಶ ವಿಧಾನ ಸಭೆಯ ಚಳಿಗಾಲದ ಅಧಿವೇಶನವು ನಿನ್ನೆ ಪ್ರಾರಂಭವಾದೊಡನೆ ವಿರೋಧ ಪಕ್ಷದವರು ಗೂಂಡಾಶಾಸನ ವಾಪಸು ತೆಗೆದುಕೊಳ್ಳಲು, ಬಂಧಿತ ವಿದ್ಯಾರ್ಥಿಗಳ ಬಿಡುಗಡೆಗೂ ಒತ್ತಾಯ ಮಾಡಿದರೆಂದು ಲಕ್ನೋ ವಾರ್ತೆ ತಿಳಿಸುತ್ತದೆ.

ಒತ್ತಾಯ ಪ್ರಾರಂಭವಾದ ಕಾಲದಲ್ಲಿ ಅವರಿಗೂ ಕಾಂಗ್ರೆಸ್ ಸದಸ್ಯರಿಗೂ ಹೊಡೆದಾಟ ಪ್ರಾರಂಭವಾಗಿ, ವಿರೋಧ ಸದಸ್ಯರು ಮೈಕ್‌ಗಳನ್ನು ಜಜ್ಜಿ, ಫೈಲುಗಳನ್ನು ಎಳೆದುಕೊಂಡರು

ಹಿಂಸಾತ್ಮಕ, ಅನಾಯಕತ್ವ, ಉಲ್ಲಂಘನೆ ಇವುಗಳ ಶಂಕೆ ಉಂಟಾಗಿ ಸಭೆಯನ್ನು ಅನಿರ್ದಿಷ್ಟ ಕಾಲ ಸ್ಪೀಕರರು ಮುಂದಕ್ಕೆ ಹಾಕಿದರು.

●

ರೈಲ್ವೆಯವರ ಸಭೆ

ಮೈಸೂರು : ದಕ್ಷಿಣ ಭಾರತ ರೈಲೆ, ನೌಕರರ ಸಂಘದ ಅಂಗರಚನೆಯಲ್ಲಿ ಮುಷ್ಕರಿಸುವ ಹಕ್ಕನ್ನು ತೆಗೆದುಹಾಕುವ ನಿರ್ಧಾರವನ್ನು ಭಾರತ ರೈಲ್ವೆ ರಾಷ್ಟ್ರೀಯ ಸಂಘ ಅನುಮೋದಿಸಿದರೆ, ದೇಶದ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುವ ವರೆಗೆ ರೈಲ್ವೆ ನೌಕರರ ಈ ಬೆದಂಕೆ ಕಪ್ಪುವುದೆಂದು ಅಭಿಪ್ರಾಯಪಟ್ಟಿತು

★

ಭೂತಾನು ರಾಜರ ಆಗಮನ

ಭೂತಾನು ರಾಜರು ಹನ್ನೊಂದು ದಿನಗಳ ಭಾರತ ದೇಶದ ಭೇಟಿಗಾಗಿ ಈ ತಿಂಗಳು ನೇ ತಾ॥ ನವ ದೆಹಲಿಗೆ ಆಗಮನ

★ ಸಿದ್ದಲಿಂಗಪುರದಲ್ಲಿ ವಸ್ತು ಯ ಜಾತ್ರೆ ನಡೆಯಿತು

●

ಶಕ್ತಿ ಬಳಕೆ ಇಲ್ಲ

ಕೈಗಾರಿಕೆ ಮಂತ್ರಿ ಶ್ರೀ ಕೃಷ್ಣರವರು ಬೆಂಗಳೂರಿನಲ್ಲಿ ಮಾತನಾಡುತ್ತಾ, ತಮ್ಮ ಮನೆಯಲ್ಲಿ ಬೆಲ್ಲ ಉಪಯೋಗ ಆರಂಭಿಸಿ ಸಕ್ಕರೆ ಉಪಯೋಗ ನಿಲ್ಲಿಸಿರುವುದಾಗಿ ತಿಳಿಸಿದರು. ತಮ್ಮ ಪತ್ನಿಯೊಡನೆ ಈ ವಿಚಾರ ಪರಿಶೀಲಿಸಿಲ್ಲವೆಂದು ಅವರು ನುಡಿದರು

★

ಕಾಗದಪತ್ರ ಓದಲಿಲ್ಲ

ಲೋಕಸಭೆಯಲ್ಲಿ ಸ್ಪೀಕರ್ ಶ್ರೀ ದಿಲ್ಲರು ಸಿ ಬಿ ಐ ವರದಿಯಿಂದ ಟಿಪ್ಪಣಿ ತೆಗೆದುಕೊಳ್ಳುವುದನ್ನು ತಿರಸ್ಕರಿಸಿದ್ದಕ್ಕಾಗಿ ವಿರೋಧ ಗುಂಪಿನ ನಾಯಕರು ವರದಿಯನ್ನು ಅದಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ಓದಲಿಲ್ಲ ಆದರೆ ರಾಜ್ಯಸಭೆಯಲ್ಲಿ ಅದರ ಪ್ರತಿಯನ್ನು 2 ಗಂಟೆಗಳ ಕಾಲ ಓದಿದರು.

○

ಶ್ರೀ ಹನುಮಜ್ಜಯಂತಿ

43 ನೇ ವರ್ಷದ ಶ್ರೀ ಹನುಮಜ್ಜಯಂತಿ ಮಹೋತ್ಸವ ಇದೇ 29 ನೇ ತಾರೀಖು ಬೆಳಿಗ್ಗೆ 10 ಗಂಟೆಗೆ ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಸ್ವಾಮಿಗಳವರ ನೇತೃತ್ವದಲ್ಲಿ. ಶ್ರೀ ಶ್ರೀ ಶಾಂತವೀರಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಂಗೀತವಿದ್ವಾಂಸರು, ಸಾಹಿತಿಗಳು, ಪಂಡಿತರು ಮುಂತಾದವರಿಗೆ ಸನ್ಮಾನ ಸಮಾರಂಭ ಏರ್ಪಡಿಸಿದೆ ಎಂದು ವೀರಭದ್ರ ಮಂದಿರದಲ್ಲಿ ನಿನ್ನೆ ಸಂಜೆ ಏರ್ಪಡಿಸಿದ್ದ ಪತ್ರಿಕಾ ಸಮ್ಮೇಳನದಲ್ಲಿ ಡಾ॥ ಬಿ ದೇವೇಂದ್ರಪ್ಪನವರು ತಿಳಿಸಿದರು.

★

ಆಕ್ರಮಣ

ವಿಶ್ವಸಂಸ್ಥೆ — 51 ವರ್ಷಗಳ ಕಾರ್ಯಾನಂತರ ವಿಶ್ವಸಂಸ್ಥೆಯು "ಆಕ್ರಮಣ" ವನ್ನು 350 ಪದಗಳಲ್ಲಿ (ಆದರೂ ಅಸಂಪೂರ್ಣವಾಗಿ) ವಿವರಿಸಿದೆ.

ಅಕ್ಕಿ ಬೆಲೆ ನಿಗದಿ

ತಮಿಳುನಾಡಿನ ಸರ್ಕಾರ ಅಕ್ಕಿ ಬೆಲೆಯನ್ನು ಕೆಜಿಗೆ ರೂ 2–20 ರಂತೆ ನಿಗದಿಪಡಿಸಿದೆ ಇದು ರಾಜ್ಯದಲ್ಲಿಯ ಮಾರುಕಟ್ಟೆಗಳಲ್ಲಿನ ಹೆಲಿಯ ಅರ್ಧದಷ್ಟಿದೆ ಎಂದು ಮದರಾಸು ವಾರ್ತೆ

★

ಬಿಹಾರು ಮಾದರಿ ಚಳುವಳಿ

ಲಕ್ನೋದಿಂದ ಬಂದಿರುವ ವರದಿ ಪ್ರಕಾರ, ಕಮ್ಯೂನಿಸ್ಟೇತರ ವಿರೋಧ ಪಕ್ಷಗಳ ನಾಯಕರು ನಡೆಸಿದ ಸಭೆಯಲ್ಲಿ ಬೀಹಾರ ಮಾದರಿ ಚಳವಳಿಯನ್ನು ಉತ್ತರ ಪ್ರದೇಶದಲ್ಲಿ ಹೂಡಲು ನಿರ್ಧರಿಸಿದರು

★

ವಿರುದ್ಧ ಅಭಿಪ್ರಾಯ

ಸಕ್ಕರೆ, ಬಟ್ಟೆ, ಔಷಧಿ ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡಬೇಕೆಂಬ ಸಲಹೆಬಗ್ಗೆ ಕಾಂಗ್ರೆಸ್ ಪಾರ್ಲಿಮೆಂಟರಿ ಪಾರ್ಟಿ ಕಾರ್ಯಕಾರಿ ಸಮಿತಿಯಲ್ಲಿ ಎರಡು ಗುಂಪುಗಳಲ್ಲಿ ವಿರುದ್ಧ ಹೋರಾಟವಾಯಿತು.

★

ಅಭಿವೃದ್ಧಿ ಕಾರ್ಯ

ಕೊಟ್ಟಯಂನಿಂದ ವರದಿ ಆಗಿರುವಂತೆ ಪಶ್ಚಿಮ ಘಾಟ್ ಅಭಿವೃದ್ಧಿ ಯೋಜನೆ ಮಾರ್ಚಿಗೆ ಮೊದಲು ಪ್ರಾರಂಭಿಸಲಾಗುವುದು.

★

ನಗರದಲ್ಲಿ ವಿದ್ಯುಚ್ಛಕ್ತಿ ಸಪ್ತಾಹ

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ವಿವಿಧ ನಗರದಲ್ಲಿ ಇದೇ 25 ರಿಂದ ಒಂದು ವಾರ ಕಾಲ ವಿದ್ಯುಚ್ಛಕ್ತಿ ಸಪ್ತಾಹವನ್ನು ಆಚರಿಸುವರು.

ಮಂತ್ರಿ ಶ್ರೀ ಚನ್ನಬಸಪ್ಪನವರು ಉದ್ಘಾಟಿಸುವರು ಮಂತ್ರಿ ಶ್ರೀ ರಾಚಯ್ಯನವರು ಅಧ್ಯಕ್ಷತೆ ವಹಿಸುವರು.

ಚುನಾವಣೆಯಲ್ಲಿ ಅರ್ಹರು ಮಾತ್ರ

ಹಾಜಿಪುರ (ಬೀಹಾರು)— ಒಂದು ಬಹು ಭಾರಿ ಬಹಿರಂಗ ಸಭೆಯಲ್ಲಿ ಜಯಪ್ರಕಾಶ ನಾರಾಯಣರು ಮಾತನಾಡುತ್ತಾ— ಮುಂದಿನ ಚುನಾವಣೆಗಳಲ್ಲಿ ಯೋಗ್ಯರು ಮತ್ತು ಅರ್ಹರು ಮಾತ್ರ ಆರಿಸಲ್ಪಡುವರೆಂದೂ, ಜನಸಂಘರ್ಷ ಮತ್ತು ಭ್ರಷ್ಟಸಂಘರ್ಷ ಸಮಿತಿಗಳು ಜಂಟಿಯಾಗಿ ಉಮೇದುವಾರರನ್ನು ಆಯ್ಕೆಮಾಡುವನೆಂದೂ ಹೇಳಿದರು – ಶ್ರೀಮತಿ ಗಾಂಧಿಯವರ ಭ್ರಷ್ಟಾಚಾರ ಸರಕಾರವೊಡನೆ ಅಸಹಕಾರದಿಂದಿರುವಂತೆ ಜನರಿಗೆ ಸೂಚಿಸಿದರು – ಮುಂದಿನ ಸಾರ್ವಜನಿಕ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಕಮ್ಯುನಿಸ್ಟರಿಗೆ ಒಂದು ಓಟನ್ನೂ ಕೊಡಬಾರದೆಂದು ಹೇಳಿದರು.

ವಿದ್ಯುಚ್ಛಕ್ತಿ ಸಪ್ತಾಹ

ಮೈಸೂರು— ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಮೈಸೂರ ನಗರದಲ್ಲಿ 25–12–74 ರಿಂದ ಒಂದು ವಾರ ಕಾಲ ವಿದ್ಯುಚ್ಛಕ್ತಿ ಸಪ್ತಾಹವನ್ನು ಆಚರಿಸುವರು

ಬೌದ್ಧ ಗ್ರಂಥಗಳ ಭಾಷಾಂತರಕಾರ

ಬೌದ್ಧ ಗ್ರಂಥಗಳ ಭಾಷಾಂತರಕಾರ ಮತ್ತು ವಿಮರ್ಶಕಕಾರ ಮತ್ತು ಅವರ ಹೆಸರು ಅನೇಕ ಟಿಬೆಟ್ ಕೈಬರಹ ಗ್ರಂಥಗಳಲ್ಲಿ ಬಂದಿರುವ ಜರ್ಮನ್ ವಿದ್ವಾಂಸರ ಮನೆಯು ಮಧ್ಯ ಏಷ್ಯಾದ ಉಬ್ಬರಸ್ಥಾನದಲ್ಲಿ ದಕ್ಷಿಣ ಜಿಲ್ಲೆಯಲ್ಲಿ ಪತ್ತೆಯಾಗಿದೆ ; ಅಲ್ಲಿ ಸಿಕ್ಕಿದ ಒಂದು ಪಾತ್ರೆಯ ಮೇಲೆ ಜರ್ಮ ಎಂದು ಕೆತ್ತಲಾಗಿದೆ.

ಬಾಲಿಹುಲಿ

ಅಪರೂಪದ ವನ್ಯಮೃಗವಾಗಿದ್ದ ಬಾಲಿಹುಲಿಯ ಸಂತತಿ ವಾಸ್ತವವಾಗಿ ಈಗ ಸಂಪೂರ್ಣವಾಗಿ ಅಳಿಸಿ ಹೋಗಿದೆ ಎಂದು ವನ್ಯಮೃಗಗಳ ಸಂಘ ಪ್ರಕಟಿಸಿದೆ.

ವುಡ್‌ಲಾಂಡ್ 13 12 74 ರಿಂದ

ಅಮೋಘ ಆರಂಭ

ಅಪೂರ್ವ ಈಸ್ಟ್‌ಮನ್ ಕಲರ್ ಮಲಯಾಳಂ ಕಲಾಕೃತಿ

ಚ ಟ್ಟ ಕ್ಕಾ ರಿ

ಪಾತ್ರ — ಲಕ್ಷ್ಮೀ ಮೋಹನ್ ದಿನ 5 ಪ್ರದರ್ಶನಗಳು

ಅ ಪೆ ರಾ 17 12 74 ರಿಂದ

ಎ ವಿ ಎಂ ರಾಜನ್ ಎಂ ಆರ್ ಆರ್ ವಾಸು ವಿಜಯಕುಮಾರಿ ಜಯಚಿತ್ರ ಅಭಿನಯಿಸಿರುವ

ಅಮೋಘ ತಮಿಳು ಚಿತ್ರ

ಮ ಗ ಳು ಕ್ಕಾ ಗ

ದಿನ 3 ಪ್ರದರ್ಶನಗಳು

For Holdalls, Kit Bags, & Suit Cases

ಹೋಲ್ಡ್ ಆಲ್, ಕಿಟ್ ಬ್ಯಾಗ್, ಸೂಟ್‌ಕೇಸುಗಳಿಗೆ

ಬ್ಯಾಂಕ್‌ರೋಡ್‌ಬಾಹು ಸಾರ್

Fair Price Shop in Actual Practice

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ



Protect the Cow

SHAKTI

SUDHA

A Superb Tonic

Quality Printing Neat Binding

Lakshminarasimha Press

Sivarampet, Mysore 1

Help The Gorakshana

—HumanitarianPropoganda Monthly—

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore